ಹರಪನಹಳ್ಳಿ ತಾಲ್ಲೂಕಿನಲ್ಲಿ ಗೋಶಾಲೆಗಳನ್ನು ತೆರೆಯಲಾಗುವುದು.

೧೧೯೯. ಶ್ರೀ ಬಿ. ಹೆಚ್. ಯಂಕಾನಾಯ್ಕ (ಹರಪನಹಳ್ಳಿ).— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿ ತೀವ್ರ ಬರಗಾಲದಿಂದ ನೀರು ಮತ್ತು ಮೇವಿನ ಸೌಲಭ್ಯ ಇಲ್ಲದೆ ದನಕರುಗಳು ಸಾಯುವ ಸ್ಥಿತಿಗೆ ಬಂದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ.

ಆ) ಹಾಗಿದ್ದಲ್ಲಿ ಸದರಿ ಜಾನುವಾರುಗಳಿಗೆ ತಾಲ್ಲೂಕಿನಲ್ಲಿ ಗೋಶಾಲೆಗಳನ್ನೇನಾದರೂ ತೆರೆಯಲಾಗಿದೆಯೇ.

ಇ) ಹಾಗಿಲ್ಲದಿದ್ದಲ್ಲಿ, ಗೋಶಾಲೆಗಳನ್ನು ತೆರೆಯಲು ಸರ್ಕಾರದವರು ಶೀಘ್ರ ಕ್ರಮ ಕೈಗೊಳ್ಳುವರೆ.

ಈ) ಸದರಿ ಗೋಶಾಲೆಗಳನ್ನು ಹಿರೇಮೇಗಳಗೇರಿ ಮತ್ತು ಹಲವಾಗಲು ಈ ಸ್ಥಳಗಳಲ್ಲಿ ತೆರೆಯಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿ ೭೫ ಗ್ರಾಮಗಳು ಅಭಾವ ಪೀಡಿತ ಗ್ರಾಮಗಳೆಂದು ಗುರುತಿಸಲಾಗಿದೆ. ದನಗಳಿಗೆ ಮೇವು ಮತ್ತು ಕುಡಿಯುವ ನೀರಿನ ವ್ಯವಸ್ಥೆಗೆ ಕ್ರಮ ಕೈಗೊಳ್ಳಲಾಗಿದೆ. ಆದುದರಿಂದ ಅವು ಸಾಯುವ ಸ್ಥಿತಿಗೆ ಬಂದಿವೆ ಎಂಬುದು ಸರಿಯಲ್ಲ.

ಆ) ಇಲ್ಲ. ಆದರೆ ಅಭಾವ ಪೀಡಿತ ಎಲ್ಲ ತಾಲ್ಲೂಕುಗಳಲ್ಲಿ ಗೋಶಾಲೆ ತೆರೆಯಲು ಸರ್ಕಾರ ಸೂಕ್ತ ಆದೇಶ ಕೊಡಲಾಗಿದೆ.

ಇ) ಹೌದು.

ಈ) ಹಿರೇಮೇಗಳಗೇರಿ ಗ್ರಾಮದಲ್ಲಿ ಒಂದು ಗೋಶಾಲೆಯನ್ನು ತೆರೆಯಲು ತೀರ್ಮಾನಿಸಿದ್ದು, ಹಲವಾಗಲು ಗ್ರಾಮವು ಈ ಗ್ರಾಮದ ಸಮೀಪವಿರುವುದರಿಂದ ಈ ಗ್ರಾಮದಲ್ಲಿ ಇನ್ನೊಂದು ಗೋಶಾಲೆಯ ಅವಶ್ಯಕತೆಯಿಲ್ಲ.

ಶ್ರೀ ಬಿ. ಹೆಚ್. ಯಂಕಾನಾಯ್ಕ.— ಹಿರೇಮೇಗಳಗೇರಿ ಮತ್ತು ಹಲವಾಗಲು ಗ್ರಾಮಗಳು ಹತ್ತಿರದವು ಎಂದು ಹೇಳಿರುವುದು ತಪ್ಪು ಮಾಹಿತಿ. ಅವಕ್ಕೆ ಸಾಕಷ್ಟು ದೂರವಿದೆ. ಆದ್ದರಿಂದ ಅವೆರೆಡರಲ್ಲೂ ಪ್ರತ್ಯೇಕ ಗೋಶಾಲೆಗಳನ್ನು ತೆರೆಯಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.— ಹಿರೇಮೇಗಳಗೇರಿ ಗ್ರಾಮದಲ್ಲಿ ಗೋಶಾಲೆ ತೆರೆಯಲು ಈಗಾಗಲೇ ಆದೇಶ ಹೊರಡಿಸಿದೆ. ಅವಶ್ಯ ಬಿದ್ದಲ್ಲಿ ಹಲವಾಗಲು ಗ್ರಾಮದಲ್ಲೂ ತೆರೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶಹಬಾದ್‌ನಲ್ಲಿರುವ ಹೆಂಡದಂಗಡಿಗಳನ್ನು ಸ್ಥಳಾಂತರಿಸುವುದು.

೧೩೩೪. ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್).— ಮಾನ್ಯ ಅಬ್ಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೫–೮೬ನೇ ಸಾಲಿನಲ್ಲಿ ಲೋಹರ್‌ಗಲ್ಲಾ ಶಹಬಾದ್ ಪಟ್ಟಣದಲ್ಲಿರುವ ಶೇಂದಿ ಅಂಗಡಿ ನಡೆಸದೆ ಇರುವುದು ನಿಜವೇ ?

ಆ) ಹಾಗಿದ್ದಲ್ಲಿ ಈ ಶೇಂದಿ ಅಂಗಡಿಯನ್ನು ಎಲ್ಲಿಗೆ ಸ್ಥಳಾಂತರಿಸಲಾಗುವುದು.

ಇ) ಇದುವರೆವಿಗೂ ಸ್ಥಳಾಂತರಿಸದಿದ್ದಲ್ಲಿ ಕಾರಣವೇನು ?

ಈ) ಪಾಡಿ ಪಟ್ಟಣ (ಚಿತಾಪುರ)ದ ಮಾರುಕಟ್ಟೆಯಲ್ಲಿ ಮಂಕ್ತವಾಗಿ ಶೇಂದಿಯನ್ನು ಮಾರಾಟ ಮಾಡುತ್ತಿರುವುದು ನಿಜವೇ, ಹಾಗಿದ್ದಲ್ಲಿ ಸರ್ಕಾರ ಇದನ್ನು ಹೇಗೆ ತಡೆಗಟ್ಟುವುದು.

ಶ್ರೀ ರಮೇಶ ಜಿಗಜಿಣಗಿ (ಅಬಕಾರಿ ರಾಜ್ಯ ಸಚಿವರು).—

ಅ) ಹೌದು.

ಆ) ಈಗಾಗಲೇ ಶಹಬಾದಿನ ಸರ್ವೆ ನಂ. ೨೨೦ ಕ್ಕೆ ಸ್ಥಳಾಂತರಿಸಲಾಗಿದೆ.

ಇ) ಮೇಲಿನ ಪ್ರಶ್ನೆಯ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಇಲ್ಲ.

ಶ್ರೀ ಕೆ. ಬಿ. ಶಾಣಪ್ಪ.— ಇಡೀ ಸದನಕ್ಕೆ ಸಂಬಂಧಪಟ್ಟ ಮಂತ್ರಿಗಳ ಈ ಉತ್ತರದಲ್ಲಿ ತಪ್ಪು ಮಾಹಿತಿ ಇದ್ದರೆ ಅಂಥವರ ಮೇಲೆ ಯಾವ ಕ್ರಮ ಕೈಗೊಳ್ಳುತ್ತೀರಿ ?

ಶ್ರೀ ರಮೇಶ್ ಜಿಗಜಿಣಗಿ.— ಹಾಗೇನಾದರೂ ಇದ್ದರೆ ಅವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಕೆ. ಬಿ. ಶಾಣಪ್ಪ.— ಎಷ್ಟು ನೋಟಿಫಿಕೇಷನ್ ನೀವು ಮಾಡಿದ್ದೀರಿ, ಎಷ್ಟು ಆದೇಶ ಮಾಡಿದ್ದೀರಿ, ವರ್ಗಾಯಿಸುವುದಕ್ಕೆ

ಶ್ರೀ ರಮೇಶ್ ಜಿಗಜಿಣಗಿ.— ನಾನು ತರಿಸಿರುವ ವರದಿಗಳ ಪ್ರಕಾರ ಶಿಫ್ಟ್ ಮಾಡದೇ ಇದ್ದರೆ ಇಮ್ಮಿಡಿಯೇಟಾಗಿ ಶಿಫ್ಟ್ ಮಾಡಿಸಲು ಕ್ರಮ ಕೈಗೊಳ್ಳುತ್ತೇನೆ.

ಅಧ್ಯಕ್ಷರು.— ಶಾಣಪ್ಪನವರೇ, ಸಾಕಾ ಇನ್ನೂ ಕುಳಿತುಕೊಳ್ಳಿ.

೮೭೭. ಶ್ರೀ ಸಿ. ಕಣ್ಣನ್ (ಶಾಂತಿನಗರ).— ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸಂಬಳ ಪಡೆಯುತ್ತಿರುವ ಗ್ರಾಮಾಧಿಕಾರಿಗಳು ಎಷ್ಟು ಜನರಿದ್ದಾರೆ.

ಆ) ರಾಜದಲ್ಲಿರುವ ತೋಟಿ, ತಲವಾರರು ಮತ್ತು ನೀರಗಂಟಿಗಳು ಎಷ್ಟು ಜನರಿದ್ದಾರೆ.

ಇ) ಶ್ಯಾನುಭೋಗರು ಪಟೇಲರು, ತೋಟಿಗಳು, ತಳವಾರರು ಮತ್ತು ನೀರಗಂಟಿಗಳ ಸಂಬಳದ ಶ್ರೇಣಿ ಏನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—

ಅ) ರಾಜ್ಯದಲ್ಲಿ ಸಂಬಳ ಪಡೆಯುತ್ತಿರುವ ೯,೨೧೩ ಜನ ಗ್ರಾಮ ಲೆಕ್ಕಿಗರಿದ್ದಾರೆ. ಇವರ ವೇತನ ಶ್ರೇಣಿ ರೂ. ೪೯೦-೧೫-೫೫೦-೨೦-೬೫೦-೨೫-೯೦೦-೩೦-೯೫೦.

ಆ) ೫೧,೯೧೪ ಜನ ಮಾಜಿ ತೋಟಿ; ತಳವಾರರು ಮತ್ತಿತರ ಕೆಳದರ್ಜೆ ಗ್ರಾಮಾಧಿಕಾರಿಗಳು ರಾಜ್ಯದಲ್ಲಿದ್ದು ಈ ಹುದ್ದೆಗಳನ್ನು ದಿನಾಂಕ ೧-೨-೧೯೬೩ ರಿಂದ ರದ್ದು ಮಾಡಲಾಗಿದೆ.

ಇ) ಈ ಹುದ್ದೆಯನ್ನು ದಿನಾಂಕ ೧-೨-೧೯೬೩ ರಿಂದ ರದ್ದು ಮಾಡಲಾಗಿದೆ. ಆದ್ದರಿಂದ ಕೆಳ ದರ್ಜೆಯ ಗ್ರಾಮಾಧಿಕಾರಿಗಳ ಸಂಬಳದ ಶ್ರೇಣಿ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಸಿ. ಕಣ್ಣನ್. —ಗ್ರಾಮಲೆಕ್ಕಿಗರು ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿ ನೂರಕ್ಕೆ ನೂರರಷ್ಟು ಲಂಚವನ್ನು ತೆಗೆದುಕೊಳ್ಳುತ್ತಾರೆ. ಅವರು ಲಂಚ ತೆಗೆದುಕೊಳ್ಳುವುದಕ್ಕೆ ಕಾರಣ ಅವರ ಸಂಬಳ ಕಡಿಮೆ ಇದೆ. ಅವರು ಬಡವರಿಗೆ ತೊಂದರೆ ಕೊಡುತ್ತಾರೆ ಸರ್ಕಾರ ಅವರ ಸಂಬಳವನ್ನು ಹೆಚ್ಚು ಮಾಡಿ ಲಂಚವನ್ನು ಕಡಿಮೆ ಮಾಡುತ್ತದೆಯೇ ೧೯೬೩ರಲ್ಲಿ ತೋಟಿ ತಳವಾರ ಹುದ್ದೆಗಳನ್ನು ರದ್ದು ಮಾಡಲಾಗಿದೆ ಆ ಕುಟುಂಬಗಳು ಜೀವನ ಮಾಡುವುದಕ್ಕೆ ಸರ್ಕಾರ ಏನು ವ್ಯವಸ್ಥೆ ಮಾಡಿಕೊಟ್ಟಿದೆ ? ಈಗ ಆ ಕುಟುಂಬಗಳು ತೊಂದರೆಯಲ್ಲಿವೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ನೂರಕ್ಕೆ ನೂರರಷ್ಟು ಲಂಚ ಇದೆಯೆಂದು ಹೇಳುವುದು ಸರಿಯಲ್ಲ. ಯಾವುದಾದರೂ ನಿರ್ದಿಷ್ಟವಾದ ಕೇಸ್ ಇದ್ದರೆ ಕೊಡಿ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಲಂಚ ತೆಗೆದುಕೊಳ್ಳುವುದನ್ನು ಸರಿಪಡಿಸುವುದು ಬಹಳ ಕಷ್ಟವೆಂಬುದು ತಮಗೂ ಗೊತ್ತಿದೆ. ೧೯೬೩ರಲ್ಲಿ ತೋಟಿ ತಳವಾರಿಕೆಗಳನ್ನು ರದ್ದು ಮಾಡಿದ ಮೇಲೆ ಗ್ರಾಮಗಳಲ್ಲಿ ಎಂದಿನಂತೆ ಕಲಸಕಾರ್ಯಗಳು ನಡೆಯುತ್ತಿವೆ. ಏನೂ ತೊಂದರೆಯಾಗಿಲ್ಲ. ತೋಟಿ ತಳವಾರಿಕೆಗೆ ಬದಲಾಗಿ ಗ್ರಾಮ ಸಹಾಯಕರನ್ನು